ಎಂ ವಿ ಸಿ. ನಂ. 299/2024 ಪಿಡಬ್ಲೂಃ 3

ದಿನಾಂಕಃ 08-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿಃ ಶ್ರೀ ಎಸ್ ಎಮ್ ಬಿ ವಕೀಲರಿಂದಃ**

3. ದುರ್ಗಾ ಗ್ಯಾರೇಜ್ ನನ್ನ ಹೆಸರಿನಲ್ಲಿ ಇದೆ . ನಾನು ದುರ್ಗಾ ಗ್ಯಾರೇಜ್ ನ ಮಾಲೀಕ ಎಂದು ತೋರಿಸಲು ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ . ನಾನು 8 ನೇ ತರಗತಿಯವರೆಗೆ ಓದಿದ್ದೇನೆ . ನಾನು ವಾಹನ ರಿಪೇರಿ ಕೆಲಸ ಕಲಿತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ . ಅರ್ಜಿದಾರರು ನನಗೆ 8-10 ವರ್ಷಗಳಿಂದ ಪರಿಚಯ . ರಿಪೇರಿ ಸಮಯದಲ್ಲಿ ನಾನು ವಾಹನಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ನೋಡಿಲ್ಲ . ನಿಪಿ-6 ರ ಕಾರ್ಬನ್ ಕಾಪಿ ನನ್ನ ಬಳಿ ಇಲ್ಲ . ನಾನು ಇಟ್ಟುಕೊಂಡಿಲ್ಲ . ನಿಪಿ-6 ರಲ್ಲಿ ತೋರಿಸಿದ ವಸ್ತುಗಳನ್ನು ಖರೀದಿಸಿದ ವಸ್ತುಗಳನ್ನು ಹುಬ್ಬಳ್ಳಿ ಹಾಗೂ ಗೋವಾದಿಂದ ತಂದಿದ್ದೆವು . ಅವುಗಳನ್ನು ಖರೀದಿ ಮಾಡಿದ ರಸೀದಿಗಳನ್ನು ನಾನು ಇಟ್ಟುಕೊಂಡಿಲ್ಲ. ನಿಪಿ-6 ರಲ್ಲಿ ಬರೆದ ಬಿಡಿ ಭಾಗಗಳ ಖರೀದಿ ಒರಿಜನಲ್ ರಿಸೀದಿಗಳು ಇದ್ದರೆ ಮಾತ್ರ ನಿಪಿ-6 ರಲ್ಲಿ ಬರೆದ ಮೊತ್ತ ಸತ್ಯ ಅಥವಾ ಸುಳ್ಳು ಎಂಬುದು ಗೊತ್ತಾಗುತ್ತದೆ ಎಂದರೆ ಸರಿ . ನಿಪಿ-6 ರಲ್ಲಿ ತೋರಿಸಿದ ಸ್ಪೇರ್ ಸ್ಪಾರ್ಟ್ಸಗಳನ್ನು ನಾನೇ ಸೆಕೆಂಡಹ್ಯಾಂಡ್ ಖರೀದಿ ಮಾಡಿಕೊಂಡು ಬಂದಿದ್ದೆ . ಹುಬ್ಬಳ್ಳಿಯಲ್ಲಿ ಬಾಲಾಜಿ ಇಂಡಸ್ಟ್ರೀಯವರ ಹತ್ತಿರ ಖರೀದಿ ಮಾಡಿದ್ದೆ . ನಾನು ಸದರಿ ವಸ್ತುಗಳನ್ನು ಖರೀದಿ ಮಾಡಿದ ಬಗ್ಗೆ ಅವರು ರಸೀದಿ ಕೊಡುತ್ತಾರೆ ಎಂದರೆ ಸರಿ . ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಸ್ಪೇರ್ ಸ್ಪಾರ್ಟ್ಸ ಅಮೌಂಟ್ ಗಳನ್ನು ನಿಪಿ -6 ರಲ್ಲಿ ನನ್ನ ಮನಸ್ಸಿಗೆ ಕಂಡಂತೆ ಬರೆದಿದ್ದೇನೆ ಎಂದರೆ ಸರಿಯಲ್ಲ . ನಾನು ವಾಹನವನ್ನು ರಿಪೇರಿ ಮಾಡಿಲ್ಲ ಎಂದರೆ ಸರಿಯಲ್ಲ . ಅರ್ಜಿದಾರರು ನನಗೆ ಪರಿಚಯ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಸುಳ್ಳು ಕಾಗದ ಪತ್ರ ಹಾಜರು ಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(3 ನೇ ಎದುರುದಾರರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿರುತ್ತಾರೆ. )

**ಪಾಟೀ ಸವಾಲು:**

1(ಎ) ಮತ್ತು 1(ಬಿ) ಹಾಗೂ 4 ನೇ ಎದುರುದಾರ ಪರ ವಕೀಲರನ್ನು ಕೂಗಿಸಿ ಕರೆಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.